ಯಾವುದೇ ಚರ್ಚೆ ಇಲ್ಲ, ಅದನ್ನು ಹಿಂದುಮುಂದೆ ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. ಅದಕ್ಕೆ ನಾವು ಬದ್ಧರಾಗಿದ್ದೇವೆ ಮತ್ತು ಸರ್ಕಾರದ ನಿಲುವು ಇದರ ಬಗ್ಗೆ ಸ್ಪಷ್ಟವಾಗಿದೆ. ಏನೇ ಮಾತನಾಡಿದರೂ ಕೂಡ ಅದಕ್ಕೆ ಅನುಗುಣವಾಗಿ ಮಾತನಾಡಬೇಕೇ ಹೊರತು ಬೇರೆ ವಿಚಾರ ಇಲ್ಲ. ಒಂದು ವೇಳೆ ಆ ತರಹ ಪರಿಸ್ಥಿತಿ ಬಂದರೆ ಮುಖ್ಯಮಂತ್ರಿಗಳು ಅಥವಾ ವಿರೋಧ ಪಕ್ಷಗಳ ಮುಖಂಡರನ್ನು ಕರೆದುಕೊಂಡು ಹೋಗತಕ್ಕಂಥ ಪರಿಸ್ಥಿತಿ ಉದ್ಭವವಾದರೆ ಕರೆದುಕೊಂಡು ಹೋಗತಕ್ಕಂಥ ಕೆಲಸವನ್ನು ಮಾಡಿ ಚರ್ಚೆ ಮಾಡತಕ್ಕಂಥಾದ್ದು ಮಾಡುತ್ತೇವೆ. ಮಹಾಜನ ವರದಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಅದು ನಮಗೆ ಬಹಳ ಅನಾನುಕೂಲತೆಗಳು ಇದ್ದರೂ ಕೂಡ ಅದನ್ನು ಒಪ್ಪಿಕೊಂಡಿದ್ದೇವೆ. ಎಂದು ಹೇಳಿದ್ದೇವೆ, ಇದೇ ಅಂತಿಮ ಎಂದು ಹೇಳಿದ್ದೇವೆ. ಇದರ ಬಗ್ಗೆ ಯಾವುದೇ ರಾಜಿ ಇಲ್ಲ ಎನ್ನತಕ್ಕಂಥಾದ್ದನ್ನು ಕೂಡ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಹೊಸ ಜಿಲ್ಲೆಗಳ ಬಗ್ಗೆ, ಅವುಗಳ ಅಭಿವೃದ್ಧಿ ಬಗ್ಗೆ ನಾನು ಹೇಳಿದ್ದೇನೆ. ಈಗಾಗಲೇ ಜಿಲ್ಲಾ ಪಂಚಾಯತ್‌ನಲ್ಲಿ ಎಷ್ಟು ಹಣ ಹೋಗಬೇಕು ಎಂದು ಈಗಾಗಲೇ ಕೊಡತಕ್ಕಂಥ ಕೆಲಸ ಮಾಡಿದ್ದೇವೆ. ಅಧಿಕಾರಿಗಳನ್ನು ನೇಮಕ ಮಾಡುತ್ತಿದ್ದೇವೆ, ಹೊಸ ಕಟ್ಟಡಗಳು ಆಗಿದೆ ಮತ್ತು ಅದಕ್ಕೆ ಸ್ವಲ್ಪ ಹಣ ಇಟ್ಟಿದ್ದೇವೆ. ಇದು ಹಂತ ಹಂತವಾಗಿ ಕೊಡತಕ್ಕಂಥ ಕೆಲಸ ಮಾಡುತ್ತೇವೆ. ಈ ಜಿಲ್ಲಾ ಪಂಚಾಯತ್‌ಗಳಿಗೆ ಕೂಡ ಬೇಕಾದಂಥ ಹಣದ ಬಗ್ಗೆ, ವಿಭಜನೆಯಾದ ಮೇಲೆ ಅದಕ್ಕೆ ಅನುಗುಣವಾಗಿ ಎಷ್ಟು ತಾಲ್ಲೂಕುಗಳು ಬರುತ್ತದೆ. ಅದಕ್ಕೆ ಅನುಗುಣವಾಗಿ, ಅಲ್ಲಿರತಕ್ಕಂಥ ಜನಸಂಖ್ಯೆ, ಅಲ್ಲಿರತಕ್ಕಂಥ ಕೃಷಿ ಕಾರ್ಮಿಕರು ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಅದನ್ನು ಹಂಚಿಕೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಬೇರೆ ಅಭಿವೃದ್ಧಿ ಕೆಲಸ ಕೂಡ ಮಾಡುತ್ತಿದ್ದೇವೆ. ಅಗತ್ಯಬಿದ್ದರೆ ಮೀಟಿಂಗ್ ಕರೆದು ಬೇಕಾದರೆ ಚರ್ಚೆ ಮಾಡೋಣ. ಹೊರನಾಡು ಕನ್ನಡಿಗರ ಬಗ್ಗೆ ಈಗಾಗಲೇ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದು ಹೆಚ್ಚು ವ್ಯಾಪಕವಾಗಿ ಆಗಬೇಕು ಅದರ ಬಗ್ಗೆ ಪ್ರಯತ್ನ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಕೇರಳ, ತಮಿಳುನಾಡು ಜತೆಯಲ್ಲಿ ಆ ಗಡಿಗಳ ಬಗ್ಗೆ ಮಾತನಾಡಿ.

ಶ್ರೀ ಸಿದ್ಧರಾಮಯ್ಯ : ಅಲ್ಲಿ ಕನ್ನಡಿಗರಿಗೆ ಕಲಿಯುವುದಕ್ಕೆ, ಬೇರೆ ಬೇರೆ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ನಾವು ನಮ್ಮ ಬಾರ್ಡರ್ ಭಾಗದಲ್ಲಿ ಮಾಡಿದ್ದೇವೆ. ಅವರೂ ಕೂಡ ಮಾಡಬೇಕು ಎಂಬುದರ ಬಗ್ಗೆ ಮಾತುಕತೆಯಾಡಲು ಪ್ರಯತ್ನ ಮಾಡುತ್ತೇವೆ.

ಜೀವ ವೈವಿಧ್ಯತಾ ದಾಖಲಾತಿಯನ್ನು ಮಾಡುವ ಬಗ್ಗೆ

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ) : ಮಾನ್ಯ ಅಧ್ಯಕ್ಷರೇ, ಇದು ನಿಜವಾಗಿಯೂ ಶೂನ್ಯವೇಳೆಯಲ್ಲಿ ಎತ್ತುವ ವಿಷಯ ಅಲ್ಲ. ಅರ್ಧಗಂಟೆ ಚರ್ಚೆ ಅಥವಾ ವಿಶೇಷವಾಗಿ ಚರ್ಚೆ ಮಾಡತಕ್ಕಂಥ ವಿಷಯ. ಸದನ ಇವತ್ತು ಮುಗಿಯುತ್ತಿರುವುದರಿಂದ ಶೂನ್ಯವೇಳೆಯಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಆರೋಗ್ಯ ಸಚಿವರು, ಕೃಷಿ ಸಚಿವರು, ಶಿಕ್ಷಣ ಸಚಿವರು ವಿಶೇಷವಾಗಿ

ಗಮನಕೊಟ್ಟರೆ ಒಳ್ಳೆಯದು. ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇಲ್ಲದೇ ಇರುವುದರಿಂದ ಈಗ ನಾವು .....

ಉಪಾಧ್ಯಕ್ಷರು : ಒಂದು ಪ್ರಶ್ನೆಗೆ ಎಷ್ಟು ಸಚಿವರು ಉತ್ತರ ಕೊಡಬೇಕು?

ಶ್ರೀ ವಿಶ್ವೇಶ್ವರ ಹೆಗಡೆ : ಇದು ಎಲ್ಲರಿಗೂ ಸಂಬಂಧಪಟ್ಟಿರುವುದು. ಅವರು ಗಮನಿಸಿದರೆ ಆಮೇಲೆ ಕೋ ಆರ್ಡಿನೇಟ್ ಆಗಿ ಕೆಲಸ ಮಾಡುವುದಕ್ಕೆ ಆಗುತ್ತದೆ.

ಉಪಾಧ್ಯಕ್ಷರು : ಸದನದಲ್ಲಿರುವ ಎಲ್ಲಾ ಸಚಿವರಿಗೂ ಒಂದೇ ಪ್ರಶ್ನೆ ಕೇಳಿದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ : ಇದು ಕೋಆರ್ಡಿನೇಟ್ ಆಗಿ ಮಾಡಬೇಕಾದ ಕೆಲಸ.

ಉಪಾಧ್ಯಕ್ಷರು : ನೀವು ನೋಟೀಸ್ ಆ ರೀತಿ ಕೊಟ್ಟಿಲ್ಲ. ಶೂನ್ಯವೇಳೆಯಲ್ಲಿ ಪ್ರಶ್ನೆ ಎಂದು ಹೇಳಿದ್ದರಿಂದ ಅದಕ್ಕೆ ನಾನು ನಿಮಗೆ ಅವಕಾಶ ಕೊಡುತ್ತಿದ್ದೇನೆ. ನೀವು ಈ ರೀತಿ ಹೇಳಿದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ : ಅಧ್ಯಕ್ಷರೇ, ಗ್ಯಾಟ್ ಒಪ್ಪಂದ ಆದನಂತರ ನಮ್ಮ ಡಬ್ಲ್ಯೂ.ಟಿ.ಒ. ಇದೆ, ಇಂಟಲೆಕ್ಚುಯಲ್ ಪ್ರಾಪರ್ಟಿ ರೈಟ್ ಇತ್ಯಾದಿ ಎಲ್ಲಾ ಬಂದಿರುವುದರಿಂದ ಬಹಳ ಮುಖ್ಯವಾಗಿ ನಮ್ಮ ದೇಶದ ಬಗ್ಗೆ ನಾನು ಹೇಳುವುದಿಲ್ಲ. ನಮ್ಮ ರಾಜ್ಯದಲ್ಲಿ ಸರ್ಕಾರವೇ ಮುಂದಾಗಿ ಜೀವವೈವಿಧ್ಯತಾ ದಾಖಲಾತಿಯನ್ನು ಮಾಡಬೇಕಾದಂಥ ಅಗತ್ಯತೆ ಇದೆ. ಜೀವವೈವಿಧ್ಯತಾ ದಾಖಲಾತಿಯನ್ನು ಮಾಡಬೇಕೆನ್ನುವುದಕ್ಕೋಸ್ಕರವಾಗಿ ಸ್ಟೇಟ್ ಪ್ಲಾನಿಂಗ್ ಬೋರ್ಡ್‌ನವರು ಈಗಾಗಲೇ ಒಂದು ವರದಿಯನ್ನು ಕೊಟ್ಟಿದ್ದಾರೆ. ಇಲ್ಲಿ ಇರುವಂಥ ಎಲ್ಲಾ ರೀತಿಯ ಜೀವವೈವಿಧ್ಯತೆಯನ್ನು ದಾಖಲು ಮಾಡದೇಹೋದರೆ ಏನು ತೊಂದರೆಯಾಗಬಹುದು ಎಂಬುದು ನಮಗೆ ಗೊತ್ತಾಗಿದೆ. ಬರೇ ಬೇವಿನಮರಕ್ಕೆ ಪೇಟಂಟ್‌ನ್ನು ಬೇರೆಯವರು ಕೇಳಿದರು. ಅರಿಶಿಣಕ್ಕೆ ಪೇಟೆಂಟ್ ಅನ್ನು ಬೇರೆಯವರು ಮಾಡಿಕೊಳ್ಳಲಿಕ್ಕೆ ನೋಡಿದರು. ಬಾಸುಮತಿ ಅಕ್ಕಿಗೆ ಆಯಿತು. ಗುಲಾಬಿ ಹೂವಿಗೆ ಆ ಪರಿಸ್ಥಿತಿ ಆಯಿತು. ಆದ್ದರಿಂದ ನಮ್ಮಲ್ಲಿರತಕ್ಕಂಥ ಜೀವವೈವಿಧ್ಯತೆ ಯಾವ್ಯಾವುದು ಇದೆ ಅದನ್ನು ದಾಖಲು ಮಾಡಿಕೊಳ್ಳದೇ ಹೋದರೆ ವಿದೇಶಿ ಯಾವ್ಯಾವುದೋ ಕಂಪನಿಗಳು ಬಂದು ನಮ್ಮ ಊರಿನಲ್ಲಿರುವಂಥ ಎಲ್ಲಾ ಸಂಗತಿಗಳ ಮೇಲೆ ತಮ್ಮ ಒಂದು ರೈಟನ್ನು ಎಸ್ಟಾಬ್ಲಿಷ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಉಪಾಧ್ಯಕ್ಷರು : ಇದು ಕೇಂದ್ರ ಸರ್ಕಾರದವರು ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ : ಅಲ್ಲಲ್ಲ, ಇದು ಕೇಂದ್ರ ಸರ್ಕಾರದವರು ಮಾಡುವುದಲ್ಲ. ರಾಜ್ಯಸರ್ಕಾರದವರೇ ಮಾಡಬೇಕಾಗುತ್ತದೆ. ಈಗಾಗಲೇ ಅನೇಕ ಸ್ವಯಂ ಸೇವಾಸಂಸ್ಥೆಗಳು ಈ ದಾಖಲಾತಿಯನ್ನು ಮಾಡುತ್ತಿದ್ದಾರೆ.

ಉಪಾಧ್ಯಕ್ಷರು : ಇದು ರಾಜ್ಯಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ. ತಾವು ಏಕೆ ಮಾತನಾಡುತ್ತಿದ್ದೀರಿ?

ಶ್ರೀ ವಿಶ್ವೇಶ್ವರ ಹೆಗಡೆ : ಅದು ಬರುತ್ತದೆಯೇ ಇಲ್ಲವೇ ಎನ್ನುವುದನ್ನು ಮಂತ್ರಿಗಳು ಬೇಕಾದರೆ ತಮ್ಮ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಲಿ, ಅಧಿಕಾರಿಗಳ ಜತೆ ಚರ್ಚೆ ಮಾಡಲಿ. ನಾನು ಬಹಳ ಸ್ಪಷ್ಟವಾಗಿ ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ಗ್ಯಾಟ್ ಒಪ್ಪಂದಕ್ಕೂ ರಾಜ್ಯಸರ್ಕಾರಕ್ಕೂ ಏನು ಸಂಬಂಧ ಇದೆ? ಸುರೇಶ್ ಕುಮಾರ್‌ರವರೇ ಸ್ವಲ್ಪ ಅವರಿಗೆ ಹೇಳಿ. ಸಮಂಜಸ ಅಲ್ಲದೇ ಇರುವ ವಿಚಾರ ಚರ್ಚೆ ಮಾಡುವುದರಲ್ಲಿ ಏನು ಅರ್ಥ ಇದೆ? ಗ್ಯಾಟ್ ಒಪ್ಪಂದದ ಬಗ್ಗೆ ರಾಜ್ಯ ವಿಧಾನಸಭೆಯಲ್ಲಿ ಚರ್ಚೆ ಮಾಡುವುದರಿಂದ ಏನು ಪ್ರಯೋಜನ ಇದೆ?

ಶ್ರೀ ಎಸ್. ಸುರೇಶ್ ಕುಮಾರ್ : ಅವರು ಗ್ಯಾಟ್ ಒಪ್ಪಂದಕ್ಕೆ ಹೋಗುತ್ತಿಲ್ಲ. ಆ ಹಿನ್ನೆಲೆಯಲ್ಲಿ ನಮ್ಮಲ್ಲಿರುವ ನೈಸರ್ಗಿಕ ಸಂಪತ್ತನ್ನು ದಾಖಲು ಮಾಡುತ್ತಿದ್ದಾರೆ. ಅದರ ಮೇಲೆ ಬೇರೆಯವರು ಬಂದು ಆದಿಪತ್ಯ ಸ್ಥಾಪಿಸಬಹುದು. ಅದಕ್ಕೆ ಪೂರ್ತಿ ಏನು ಅವರು ಹೇಳುತ್ತಾರೆ, ಕೇಳಿಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ : ಅಧ್ಯಕ್ಷರೇ, ನಾನು ಇದರ ಬಗ್ಗೆ ಪೂರ್ಣ ಮಾಹಿತಿ ಬೇಕಾದರೆ ಹೇಳಬಲ್ಲೆ. ಈಗಾಗಲೇ ಸ್ಟೇಟ್ ಪ್ಲಾನಿಂಗ್ ಬೋರ್ಡ್‌ನವರು ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್‌ನ ಮಹದೇವ ಗಾಡ್ಗೀಳ್ ಅವರ ಅಧ್ಯಕ್ಷತೆಯಲ್ಲಿ ಅಧ್ಯಯನ ಮಾಡಿ ಸಾಕಷ್ಟು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ನಿಮಗೆ ಬರುವುದಿಲ್ಲ ಎಂದು ದಯವಿಟ್ಟು ಮಾತನಾಡಬೇಡಿ. ಬರದೇ ಹೋದರೆ ಬರುತ್ತದೆಯೇ ಇಲ್ಲವೇ ಎಂದು ತಿಳಿದುಕೊಳ್ಳಿ. ನಾವು ಸದಸ್ಯರು ಇದ್ದೇವೆ, ನಮ್ಮ ಸ್ವಲ್ಪ ತಿಳುವಳಿಕೆಯಿಂದ ನಾನು ಹೇಳುತ್ತಿದ್ದೇವೆ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆ ಎಂದರೆ .....

ಉಪಾಧ್ಯಕ್ಷರು : ಹಾಗೆಲ್ಲಾ ಹೇಳಬಾರದು.

ಶ್ರೀ ವಿಶ್ವೇಶ್ವರ ಹೆಗಡೆ : ಇದು ಬರುವುದಿಲ್ಲ, ಕೇಂದ್ರ ಸರ್ಕಾರಕ್ಕೆ ಬರುತ್ತದೆ. ನೀವು ಸದಸ್ಯರು ತಿಳಿದುಕೊಳ್ಳಬೇಕು, ನಿಮಗೇನು ತಿಳಿಯುವುದಿಲ್ಲ ಎಂದು ಹೇಳುವುದು ಸರಿಯಲ್ಲ.

ಉಪಾಧ್ಯಕ್ಷರು : ಏನು ಸರಿಯಲ್ಲ? ನೀವು ಒಬ್ಬರೇ ತಿಳಿದುಕೊಂಡು ಬರುವವರು, ಮಿಕ್ಕವರೆಲ್ಲಾ ತಿಳಿದುಕೊಂಡಿಲ್ಲ ಎಂದು ತಮ್ಮ ಅಭಿಪ್ರಾಯವೇ? ಹಾಗೆಲ್ಲಾ ಹೇಳಬಾರದು.

ಶ್ರೀ ವಿಶ್ವೇಶ್ವರ ಹೆಗಡೆ : ತಿಳಿದಿದೆ ಸಾರ್. ನಮಗೂ ಒಂದು ಚೂರು ತಿಳಿದಿದೆ ಎಂದು ನಾನು ಹೇಳುವುದು ಅಷ್ಟೆ.

ಉಪಾಧ್ಯಕ್ಷರು : ನೀವು ಸದಸ್ಯರಾಗಿ ಯಾವುದು ನಮ್ಮ ಪರಿಮಿತಿಯಲ್ಲಿ ಬರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ : ನಾನು ಹೇಳುತ್ತಾ ಇರತಕ್ಕಂಥಾದ್ದು ಏನೆಂದರೆ, ಗ್ರಾಮಪಂಚಾಯಿತಿ ಮಟ್ಟದಲ್ಲಿ ಈಗಾಗಲೇ ಅನೇಕ ಸ್ವಯಂಸೇವಾ ಸಂಸ್ಥೆಗಳು ದಾಖಲಾತಿ ಮಾಡುತ್ತಿದ್ದಾರೆ. ಅದೇ ರೀತಿ ಜೀವವೈವಿಧ್ಯತಾ ದಾಖಲಾತಿಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಶಿಕ್ಷಣ ಇಲಾಖೆ, ಕಂದಾಯ

ಇಲಾಖೆ, ಆರೋಗ್ಯ ಇಲಾಖೆಯ ಸಹಾಯದೊಂದಿಗೆ ಬೇಕಾಗಿರುವಂಥ ಒಂದು ತಿದ್ದುಪಡಿಯನ್ನು ಗ್ರಾಮೀಣಾಭಿವೃದ್ಧಿ ಸಚಿವರು ತಂದು ಅದೆಲ್ಲಾ ದಾಖಲಾತಿಯನ್ನು ಮಾಡಿಕೊಂಡರೆ ನಾವು ಜಗತ್ತಿನ ಮುಂದೆ ಧೈರ್ಯವಾಗಿ ನಿಲ್ಲಬಹುದು. ಇಲ್ಲವಾದರೆ ನಮ್ಮ ಊರಿನಲ್ಲಿ ಇರುವಂಥ ಯಾವುದೇ ಒಂದು ಜೀವವೈವಿಧ್ಯತೆಯು ಇರುವುದಕ್ಕೆ ನಾವು ನಮ್ಮ ರೈಟ್ಸನ್ನು ಎಸ್ಟಾಬ್ಲಿಷ್‌ಮೆಂಟ್ ಮಾಡುವುದಕ್ಕೆ ಆಗುವುದಿಲ್ಲ. ಹೀಗಾಗಿ

ಉಪಾಧ್ಯಕ್ಷರು : ನೀವು ಈ ರೀತಿ ಮಾತನಾಡಿದರೆ ಏನು ಹೇಳಬೇಕು?

ಶ್ರೀ ವಿಶ್ವೇಶ್ವರ ಹೆಗಡೆ : ಆದ್ದರಿಂದ ನಮ್ಮ ರೈಟ್ಸನ್ನು ಎಸ್ಟಾಬ್ಲಿಷ್‌ಮೆಂಟ್ ಮಾಡಿಕೊಳ್ಳುವುದಕ್ಕೆ ವಿಶೇಷವಾದಂಥ ಒಂದು ತಿದ್ದುಪಡಿಯನ್ನು ಉಳಿದೆಲ್ಲಾ ಸಚಿವರ ಜತೆಯಲ್ಲಿ ಚರ್ಚೆಮಾಡಿ ಗ್ರಾಮೀಣಾಭಿವೃದ್ಧಿ ಸಚಿವರು ತಂದು ಇದನ್ನು ದಾಖಲಾತಿ ಮಾಡಬೇಕು ಎಂದು ನಾನು ಒತ್ತಾಯಿಸುತ್ತಿದ್ದೇನೆ. ಮತ್ತು ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದು ಇದಕ್ಕೆ ಸರಿಯಾದಂಥ ಒಂದು ಶಾಸನವನ್ನು ತರಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಕಾನೂನು ಅಡಿಯಲ್ಲಿ ನಮ್ಮ ಜೀವವೈವಿಧ್ಯತೆಯನ್ನು ಕಾಪಾಡಿಕೊಂಡು ಬರಲು ಸರ್ಕಾರ ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಪೋಲಿಸ್ ದೌರ್ಜನ್ಯದಿಂದ ಆತ್ಮಹತ್ಯೆ ಮಾಡಿಕೊಂಡ ಪರಿಶಿಷ್ಟ ಜಾತಿಯ ಮೀರಳ ತಾಯಿಗೆ ಪರಿಹಾರ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪಾಧ್ಯಕ್ಷರೆ, ಪೋಲೀಸ್ ದೌರ್ಜನ್ಯದಿಂದ ಆತ್ಮಹತ್ಯೆ ಮಾಡಿಕೊಂಡಂತಹ ಪರಿಶಿಷ್ಟ ಜಾತಿಯ ಮೀರಳ ತಾಯಿಗೆ ಪರಿಹಾರ ಕೊಡುವ ಬಗ್ಗೆ ನಾನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಪೋಲೀಸ್ ಲಾಕಪ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಂತಹವರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುತ್ತೀರಿ. ಗೋಲಿಬಾರ್ ನಿಂದ ಸತ್ತವರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುತ್ತೀರಿ. ಆದರೆ ಪೋಲೀಸ್ ದೌರ್ಜನ್ಯದಿಂದ ಆತ್ಮಹತ್ಯೆ ಮಾಡಿಕೊಂಡವರಿಗೆ ಪರಿಹಾರ ಏಕೆ ಕೊಡುವುದಿಲ್ಲ? ಪರಿಹಾರ ಕೊಡಿ ಅಂದರೆ ಪೋಲೀಸ್ ವರದಿಯ ಪ್ರಕಾರ ಅದು ದೌರ್ಜನ್ಯ ಅಲ್ಲವೆಂದು ಹೇಳುತ್ತಾರೆ. ಇವತ್ತು ಸಮಾಜ ಕಲ್ಯಾಣ ಇಲಾಖೆಯಲ್ಲಿ ಹೇಳುತ್ತಾರೆ. ಅದು ಸವರ್ಣೀಯರಿಂದ ಹಲ್ಲೆಯಾದರೆ ಮಾತ್ರ ಪರಿಹಾರ ಸಿಗುತ್ತದೆ ಪೋಲೀಸರ ದೌರ್ಜನ್ಯದಿಂದ ಆದರೆ ಸಿಗುವುದಿಲ್ಲವೆಂದು ಹೇಳುತ್ತಾರೆ. ನನ್ನ ಕ್ಷೇತ್ರದಲ್ಲಿ ನಡೆದಿರತಕ್ಕ ಘಟನೆ ಇದು. ನೀಲು ಹರಿಜನ ಕೋಂ ದುರ್ಗ ಹರಿಜನ, ಐಸೆಂಟ್ ಕಾಲೋನಿಯಲ್ಲಿ ವಾಸವಾಗಿರತಕ್ಕ ಅವರ ಅಳಿಯ ಕರಿಯ ಹರಿಜನ ಎನ್ನತಕ್ಕವರು ಕಾಣೆಯಾಗಿ ಕಡೆಗೆ ಅದು ಕೊಲೆ ಎಂದು ಪೋಲೀಸ್ ನವರು ಅಭಿಪ್ರಾಯಪಡುತ್ತಾರೆ. ಈ ವಿಚಾರದಲ್ಲಿ ತನಿಖೆ ಮಾಡಲಿಕ್ಕೆ ನೀಲು ಹರಿಜನ ಅವರ ಮಗಳನ್ನು ಪೋಲೀಸ್ ಠಾಣೆಗೆ ಕೆರೆದುಕೊಂಡು ಹೋಗುತ್ತಾರೆ. ಅಲ್ಲಿ ದೌರ್ಜನ್ಯ ನಡೆಸಿ ಮಾರನೆಯ ದಿನ ಬರಲಿಕ್ಕೆ ಹೇಳುತ್ತಾರೆ. ಆಗ 20 ವರ್ಷದ ಪರಿಶಿಷ್ಟಜಾತಿಯ ಹುಡುಗಿ ತನ್ನ ಕೈ ಮೇಲೆ